<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಭ್ರಷ್ಟಾಚಾರ ನಿಗ್ರಹ ಪ್ರಕರಣಗಳ ಅಧಿವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ</u>

**Spl. C. (P.C.) 09/2014**

ಫ್ರಾಸಾಃ **15** ಚಾಸಾಃ **46**
ದಿನಾಂಕಃ **09-04-2026**

| | | |
|---|---|---|
| ಹೆಸರು | :: | ಎನ್.ಶ್ರೀನಿವಾಸ್ |
| ತಂದೆಯ ಹೆಸರು | :: | ಲೇಟ್ ನಾರಾಯಣಪ್ಪ |
| ವಯಸ್ಸು | :: | 49 ವರ್ಷ |
| ಉದ್ಯೋಗ | :: | ಅಡುಗೆ ಸಹಾಯಕರು |
| ವಾಸ ಸ್ಥಳ | :: | ಲಕ್ಷ್ಮೀ ಸಾಗರ, ಶ್ರೀನಿವಾಸಪುರ ತಾಲ್ಲೂಕು |

<u>ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಗಕರಿಂದಃ</u>

1. ನಾನು 1998 -99 ನೇ ಸಾಲಿನಿಂದ ಇಲ್ಲಿಯವರೆಗೂ ಕೋಲಾರ ನಗರದ ಕುವೆಂಪು ನಗರದಲ್ಲಿರುವ ಡಾಕ್ಟರ್ ಅಂಬೇಡ್ಕರ್ ಬಾಲಕರ ವಿದ್ಯಾರ್ಥಿ ನಿಲಯ - 1 ಇದರಲ್ಲಿ ಅಡುಗೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ. ಆ ಹಾಸ್ಟೆಲ್ ನಲ್ಲಿ ಎಂ.ಮಂಜುನಾಥ, ರತ್ನಮ್ಮ, ನಾರಾಯಣಮ್ಮ, ವೆಂಕಟಮ್ಮ, ಚಿನ್ನಮ್ಮ, ರಾಜಶೇಖರ್, ವೆಂಕಟರಮಣಪ್ಪ, ಆಂಜಪ್ಪ ಮತ್ತು ಚಿನ್ನಪ್ಪ ಸಹಾ ಅಡುಗೆಯವರು ಮತ್ತು ಅಡುಗೆ ಸಹಾಯಕರಾಗಿ ನನ್ನ ಜೊತೆ ಕೆಲಸ ಮಾಡಿದ್ದಾರೆ. ಚಿನ್ನಮ್ಮ ಇವರು ಈಗ ಸುಮಾರು 15-20 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಲೋಕಾಯುಕ್ತ ಕಛೇರಿಗೆ ನಮ್ಮನ್ನು ಕರೆಸಿದಾಗ ಸದರಿ ಹಾಸ್ಟೆಲ್ ನಲ್ಲಿ ಮಂಜುನಾಥ, ರತ್ನಮ್ಮ, ವೆಂಕಟಮ್ಮ, ವೆಂಕಟರಮಣಪ್ಪ, ಆಂಜಪ್ಪ, ಚಿನ್ನಪ್ಪ ಮತ್ತು ನಾನು ಆ ಹಾಸ್ಟೆಲ್ ನಲ್ಲಿ ಕೆಲಸ ಮಾಡುತ್ತಿದ್ದೆವು.

2. ನಿಮಗೆ ವೇತನ ಹೇಗೆ ಪಾವತಿಯಾಗುತ್ತಿತ್ತು ಎಂದರೆ ಸಾಕ್ಷಿದಾರರು ವಾರ್ಡನ್ ಮೂಲಕ ನಮಗೆ ಚೆಕ್ ನೀಡುತ್ತಿದ್ದರು ಮತ್ತು ನಾವು ಅದನ್ನು ಬ್ಯಾಂಕ್ ನಲ್ಲಿ ಜಮಾ ಮಾಡುತ್ತಿದ್ದೆವು ಎನ್ನುತ್ತಾರೆ.

3. ಲೋಕಾಯುಕ್ತ ಕಛೇರಿಗೆ ನಮ್ಮನ್ನು 02.02.2013 ರಂದು ಕರೆಸಿದ್ದರು. ಅಲ್ಲಿ ನನ್ನ ಮಾದರಿ ಬರವಣಿಗೆಗಳನ್ನು ಮತ್ತು ಸಹಿಗಳನ್ನು ಪಡೆದರು. ಈಗ ತೋರಿಸಿದ ನಿ ಪಿ 270 ಮತ್ತು 271 ಇವೇ ಲೋಕಾಯುಕ್ತ ಕಛೇರಿಯಲ್ಲಿ ಮಾದರಿಯಾಗಿ ಪಡೆದ ನನ್ನ ಸಹಿ ಮತ್ತು

ಬರವಣಿಗೆಗಳಿವೆ. ನಾನು ಯಾವಾಗಲೂ ಎನ್.ಶ್ರೀನಿವಾಸ ಎಂದೇ ಸಹಿ ಮಾಡುತ್ತೇನೆ. ಆ ದಿನ ಚೆನ್ನಪ್ಪ, ಕಾಂತರಾಜು, ನಾರಾಯಣಮ್ಮ ಸಹಾ ಇದ್ದರು. ಆ ಸಮಯದಲ್ಲಿ ಈಗ ತೋರಿಸಿದ ನಿ ಪಿ 277 ಮಹಜರನ್ನು ಮಾಡಿದ್ದಾರೆ. ಅದರಲ್ಲಿರುವ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿ ಪಿ 277(ಸಿ) ಎಂದು ಗುರುತಿಸಲಾಯಿತು.

4. ಪಾಪಣ್ಣ, ಶಂಕರಪ್ಪ, ಬಾಬಣ್ಣ, ಮುದ್ದಪ್ಪ, ನಾರಾಯಣಸ್ವಾಮಿ, ಶ್ರೀನಿವಾಸ, ನಾಗರಾಜ್, ನಲ್ಲಪ್ಪ, ಕರಿಯಪ್ಪ, ನಾರಾಯಣಪ್ಪ ಮತ್ತು ತಮ್ಮಣ್ಣ ಇವರು ಯಾರಾದರೂ ನಿಮ್ಮ ಜೊತೆಗೆ ಡಾಕ್ಟರ್ ಅಂಬೇಡ್ಕರ್ ಬಾಲಕರ ವಿದ್ಯಾರ್ಥಿ ನಿಲಯ – 1 ಇದರಲ್ಲಿ ಕೆಲಸ ಮಾಡಿದ್ದಾರೆಯೇ ಎಂದರೆ ಸಾಕ್ಷಿದಾರರು ಅವರ್ಯಾರೂ ಆ ಹಾಸ್ಟೆಲ್ ನಲ್ಲಿ ಕೆಲಸ ಮಾಡಿಲ್ಲ ಮತ್ತು ಅವರು ಯಾರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿ ಪಿ 451 ಇದರ ಭಾಗವಾದ ಹಣ ಸಂದಾಯ ರಸೀದಿ ಎಂಬ ದಾಖಲೆಯನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಶ್ರೀನಿವಾಸ ಎಂಬ ಹೆಸರಿನ ಮುಂದೆ ಇರುವ ಸಹಿಯನ್ನು ತೋರಿಸಿ ಅದು ಯಾರದ್ದು ಎಂದರೆ ಸಾಕ್ಷಿದಾರರು ಆ ಸಹಿ ನನ್ನದಲ್ಲ ಎನ್ನುತ್ತಾರೆ. ಸಾಕ್ಷಿಗೆ ತೋರಿಸಿದ ಸದರಿ ದಾಖಲೆಯನ್ನು ನಿ ಪಿ 451(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ನಿರಾಕರಿಸಿದ ಸಹಿ ಕ್ರಮ ಸಂಖ್ಯೆ 6 ರಲ್ಲಿ ಇದೆ. ತನಿಖಾಧಿಕಾರಿ ಕರೆಸಿದ್ದಾಗ ನಿ ಪಿ 451(ಎ) ದಾಖಲೆಯನ್ನು ತಮ್ಮ ಕಛೇರಿಯಲ್ಲಿ ತೋರಿಸಿದ್ದರು.

<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ</u>

5. ನನ್ನನ್ನು ಯಾವತ್ತೂ ಲೋಕಾಯುಕ್ತ ಕಛೇರಿಗೆ ತನಿಖಾಧಿಕಾರಿ ಕರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಮಾದರಿ ಬರವಣಿಗೆಗಳನ್ನು ಮತ್ತು ಸಹಿಗಳನ್ನು ಪಡೆದಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 277 ರಂತೆ ಮಹಜರು ಮಾಡಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಪಿ.ಎನ್.ಕೆ ವಕೀಲರಿಂದಃ</u>

6. 2011-12 ರಲ್ಲಿ ನಿಮ್ಮ ತಿಂಗಳ ಸಂಬಳ ಎಷ್ಟಿತ್ತು ಎಂದರೆ ಸಾಕ್ಷಿದಾರರು ರೂ.6,951/- ಇತ್ತು ಎನ್ನುತ್ತಾರೆ. ನಾನು ಎನ್.ಶ್ರೀನಿವಾಸ. ನಿ ಪಿ 451(ಎ) ರಲ್ಲಿನ ಸಹಿ ಕೇವಲ ಶ್ರೀನಿವಾಸ್ ಎಂದು ಇದೆ ಎಂದರೆ ಸರಿ. ಸದರಿ ನಿ ಪಿ 451(ಎ) ರ ಕ್ರಮ ಸಂಖ್ಯೆ 6 ರಲ್ಲಿರುವ ಸಹಿ ನನ್ನದಲ್ಲ ಎಂದರೆ ಸರಿ. ನಿ ಪಿ 451(ಎ) ಹಣ ಸಂದಾಯ ರಸೀದಿ ನನಗೆ ಸಂಬಂಧಿಸಿಲ್ಲ ಎಂದರೆ ಸರಿ.

ಪಾಟೀ ಸವಾಲುಃ 5, 6 ಮತ್ತು 7 ನೇ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಈ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.)

ಓ. ಹೇ. ಕೇ. ಸ. ಇದೆ,

(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ